ಪೂರ್ತಿ ಕೇಕು ನಸುಕು ಹರಿಯೋದರ ಒಳಗೆ ಹೊಟ್ಟೆ ಸೇರಿದರೆ... ಇಲ್ಲ... ಇಲ್ಲ... ಕಳೆದ ಆರು ತಿಂಗಳಿಂದ ಕಠಿಣ ಪಥ್ಯದ ಮೇಲಿದ್ದೇನೆ. ಅಷ್ಟೆಲ್ಲ ಕಾಲ ತಡೆ ಹಿಡಿದ ಕಟ್ಟು ಒಮ್ಮೆ ಒಡೆಯಿತೆಂದರೆ ಆ ಪ್ರವಾಹದ ಭರತ ಹೇಗಿರುತ್ತದೆಂದು ಅನುಭವದಿಂದ ಕಂಡುಂಡಿದ್ದೇನೆ.

ಆಗ ಅದು ಇದೊಂದು ಕೇಕಿಗೆ ನಿಲ್ಲುವುದಿಲ್ಲ. ಮೊದಲು ಮಿದುಳು ಎರಡು ಹೆಜ್ಜೆ ಹಿಂದೆ ಸರಿದು ನಿಷ್ಕ್ರಿಯಗೊಳ್ಳುತ್ತದೆ. ಕೈ ತಂತಾನೇ ಫ್ರೀಜರ್ ತೆರೆದು ಅಲ್ಲಿ ಅಳಿದುಳಿದ ಐಸ್‌ಕ್ರೀಮಿನ ಡಬರಿಗಾಗಿ ಹುಡುಕುತ್ತದೆ. ನಂತರ ಉಗ್ರಾಣದಲ್ಲಿ ಅಡಗಿಸಿಟ್ಟ ಚಾಕಲೇಟ್‌ಗಳು, ಕ್ರೀಮ್ ಬಿಸ್ಕತ್ತುಗಳು. ಆ ನಂತರ ಮನೆಯಲ್ಲಿ ಯಾವ ಯಾವ ಸಿಹಿ ಪದಾರ್ಥ ಉಳಿದಿದೆಯೋ ಅದೆಲ್ಲ... ಏನೂ ಇಲ್ಲ ಅಂದರೆ ದಿನವೂ ಚಹಕ್ಕೆ ಹನಿಸಿಕೊಳ್ಳುವ ಜೇನು ತುಪ್ಪ, ಬೆಲ್ಲ, ಸಕ್ಕರೆಯ ಕ್ಯೂಬುಗಳು, ಪುಡಿ ಸಕ್ಕರೆ... ಸಿಹಿ ಸಿಹಿ ಸಿಹಿ ವಿಷ ಎಲ್ಲೆಲ್ಲೂ... ಅಯ್ಯೋ, ಅಯ್ಯೋ ದೇವರೇ ಎಂಬ ಉದ್ಗಾರ ನನ್ನ ಗಂಟಲಿನಿಂದ ಹರಿದು ಬಂತು.

ಇಡೀ ವರ್ಷ ಗಮನವಿಟ್ಟು ಹನಿಹನಿಯಾಗಿ ಹೊರಗೆಡವಿದ ತೂಕವನ್ನು ಒಂದೇ ವಾರದಲ್ಲಿ ಬೊಸಬೊಸನೆ ಒಳ ಸುರಿದುಕೊಳ್ಳಬಹುದೇ? ಕೇಳೋದೇ ಬೇಡ. ಒಂದು ಅತಿಗೆ ತೂಗಿದ ಉಯ್ಯಾಲೆ ಸೆಳವು ತೀರಿದೊಡನೆ ಇನ್ನೊಂದು ಅತಿಗೆ ತೂಗುವುದೇ ಅಲ್ಲವೇ ಪ್ರಕೃತಿಯ ನಿಯಮ?

ಪ್ರಪಂಚದಲ್ಲಿ ನನಗೆ ಅತೀ ಪ್ರಿಯವಾದ ಈ ಚಾಕ್ಲೆಟ್ ಕೇಕು ಅತ್ಯಂತ ಕ್ರೂರ ವೈರಿಯ ಹಾಗೆ, ಕಪಟ ನರಕದ ಬೀಗದ ಕೈ ಹಾಗೆ ಕಾಣಿಸಿತು. ದಡದಡನೆ ಎದ್ದು ಹೋಗಿ ಹಾಸಿಗೆಯ ಮೇಲೆ ಉರುಳಿಕೊಂಡೆ. ಊಹೂಂ, ಕಣ್ಣುಗಳು ಕಂಡು ಬಿಟ್ಟಿವೆ. ನಾಲಗೆ ಆ ರುಚಿಯನ್ನು ಕಲ್ಪಿಸಿಕೊಂಡಿದೆ. ಎದೆ ಸನಿಹ ತುಡಿಯುತ್ತಿದೆ. ಹೀಗಿರುವಾಗ ನಿದಿರೆ ಹತ್ತಿರ ಸುಳಿದೀತೇ?

ಒದ್ದಾಡಿಹೋದೆ. ಸಮಯ ನೋಡಿದರೆ ನಾಲ್ಕೂವರೆಯ ಮುಂಜಾನೆ. ಎದ್ದು ಅದನ್ನು ಒಂದೇ ಕ್ಷಣದಲ್ಲಿ ಕಸಕ್ಕೆ ಎಸೆದು ಬಿಟ್ಟರೆ ಹೇಗೆ ಅನ್ನಿಸಿತು. ಎಸೆದು ಬಿಡಬಹುದು. ಆಗ ಜೀವಂತ ಹೆಬ್ಬಾವೊಂದನ್ನು ಚೀಲವೊಂದರಲ್ಲಿ ಕಟ್ಟಿ ಇರಿಸಿಕೊಂಡ ಹಾಗೆ ಕಸದ ಬುಟ್ಟಿಯಲ್ಲಿ ಅದು ಇದೆ ಅಂತ ನನಗೆ ತಿಳಿದಿರುತ್ತದೆ. ಕಸದವರು ಬರುವುದು ಸೋಮವಾರ ಮುಂಜಾನೆಯೇ. ಅಲ್ಲಿನ ತನಕ ಅದು ಅಲ್ಲಿದೆ, ಅದು ಅಲ್ಲಿದೆ ಅಂತ ತಿಳಿದು ಈ ಮನೆಯಲ್ಲಿ ನಾನು ಉಸಿರಾಡಿಕೊಂಡು ಬದುಕೋಕೆ ಸಾಧ್ಯವೇ?

ಮಂಚ ಬಿಟ್ಟೆದ್ದು ಮರಳಿ ಮತ್ತೆ ಕಿಚನ್ನಿನ ಐಲ್ಯಾಂಡಿನ ಸುತ್ತ ಅಲ್ಲಲ್ಲೇ ಸುಳಿದೆ. ಬೇರೆ ಬೇರೆ ಕೋನಗಳಲ್ಲಿ ಕುಳಿತು ಅದನ್ನು ಅಳೆದೆ. ಇಡೀ ಲೋಕವೇ ಕತ್ತಲಲ್ಲಿ ಮುಳುಗಿರುವಾಗ ಹಚ್ಚಿಟ್ಟ ಒಂದೇ ಹಣತೆಯ ಕಡೆಗೇ ಕಣ್ಣು ಹೊರಳುವ ಹಾಗೆ ನನ್ನೊಳಗೆ ಈ ಕೇಕ್ ತ್ರಿವಿಕ್ರಮನ ಹಾಗೆ ಬೆಳೆದು ನಿಂತಿತ್ತು.

ರಾತ್ರಿ ಊಟವನ್ನೂ ಮಾಡದೇ ಇರುವುದು ನೆನಪಾಯಿತು. ಏನು ತಿನ್ನೋದು? ಸಾಕ್ಷಾತ್ ದೇವರೇ ಎದುರು ಪ್ರತ್ಯಕ್ಷವಾಗಿ ನಿಂತಾಗ ಹುಲು ಮಾನವರಂತೆ ಹುಲ್ಲು ಸ್ಯಾಲೆಡ್ ತಿನ್ನಲಿಕ್ಕೆ ಆದೀತೇ?

'ಕ್ರೇವಿಂಗ್ ಕಂಟ್ರೋಲ್ ಮಾಡಿಕೊಳ್ಳುವುದು ಹೇಗೆ?'ಅಂತ ಫೋನಿನಲ್ಲಿ ಒಂದು ಸರ್ಚ್ ಕೊಟ್ಟೆ. ಅದು ಏನೇನೋ ಅಸಂಬದ್ಧ ನುಡಿಯಿತು.

'ಹಸಿವು ಅಂದರೆ ಹಸಿವು. ನಮ್ಮ ಮಿದುಳಿಗೆ ಅದು ಯಾವ ಹಸಿವು ಅಂತ ಬೇರ್ಪಡಿಸಿ ಹೇಳೋಕಾಗಲ್ಲ. ಅದಕ್ಕೇ ನಿಮ್ಮ ಫೋಕಸ್ಸನ್ನು ಬೇರೆ ಹಸಿವಿನೆಡೆಗೆ ತಿರುಗಿಸಿ. ಕರೆಯಿರಿ ನಿಮ್ಮ ಸಂಗಾತಿಯನ್ನು ಹಾಸಿಗೆಗೆ. ಮಹೋತ್ಸವದಲ್ಲಿ ಪಾಲ್ಗೊಳ್ಳಿ. ನೆನಪಿರಲಿ, ಸೆಕ್ಸ್ ಬರ್ನ್ಸ್ ಕ್ಯಾಲರೀಸ್! ಆಗ ಹೊಟ್ಟೆಯ ಹಸಿವು ಹೇಗೆ ಚಟ್ಟಂತ ಮಾಯವಾಗುತ್ತೆ ನೋಡ್ತಿರಿ' ಅಂತಿತ್ತು.

ತಥ್. ಯಾರು ಬರೀತಾರೆ ಇಂಥವನ್ನೆಲ್ಲ? ನನ್ನ ಸಂಗಾತಿ ನನ್ನಗ ಅಲ್ಲಿ ಯಾವನೋ ಬಿಲಿಯನೇರ್ ಬುಡದಲ್ಲಿ ಬಂಧಿತನಾಗಾನೆ. ಇಲ್ಲೇನಿದೆ ಪಾಲ್ಗೊಳ್ಳೋಕೆ? ಮತ್ತೆ ಕೇಳಿದೆ. 'ಛೇ ಛೇ, ಚಿಂತೆ ಯಾಕೆ? ಅದಕ್ಕೆಲ್ಲ ಸಂಗಾತಿ ಬೇಕೇ ಬೇಕಂತ ಇಲ್ಲವಲ್ಲ' ಅಂತ ಉತ್ತರಿಸಿತು. ಪಿಂಡ ಈ ಸರ್ಚ್ ಎಂಜಿನ್ನಿನದು. ಅಂಥದಕ್ಕೆಲ್ಲ ಮನಸ್ಸು ಎಷ್ಟು ಶಾಂತ ಇರಬೇಕಾಗುತ್ತದೆ. ಒಳಗೆ ಮ್ಯಾರಥಾನ್ ಓಟಗಾರನೊಬ್ಬ ಅಶ್ವ ವೇಗದಲ್ಲಿ ದೌಡಾಯಿಸುತ್ತಿರುವಾಗ ಇಲ್ಲಿ ಕುಳಿತು ಶತರಂಜದ ಪಟದ ಮೇಲೆ ಏಕಾಗ್ರತೆ ವಹಿಸು ಎಂದರೆ, ಅದು ಸಾಧ್ಯವಿರುವ ಮಾತೇ?

ಹೊರಗೆ ನಿಧಾನಕ್ಕೆ ಬೆಳಕು ಹರಿಯ ಹತ್ತಿತು. ಅಲ್ಲೆಲ್ಲೋ ಸ್ಟಾರ್ಲಿಂಗ್ ಹಕ್ಕಿಗಳ ಚಿಲಿಪಿಲಿ ನಾದ. ಹಸಿವು, ನಿದ್ರೆ ಎಳೆದೆಳೆದು ಕಡೆಗೂ ದೇಹ ಒಂದು